working at Shirva has been posted to Navunda in March 1985. This physician has not yet been relieved from Shiroor. Government have therefore issued instructions to relieve him with out further delay.

In the absence of cadre and recruitment rules, it has not been possible to recruit physician to be posted in vacant posts. Now the C & R Rules have been forwarded to the Karnataka Public Service Commission for concurrence. After they are finalised, further action will be taken to recrruit physician and fill the vacants.

Some posts are vacant in allopathic dispensaries also.. The KPSC has been requested to select persons, On receipt of KPSC selected list, the posts will be filled-up.

Instructions will be issued not to divert medicines meant for one institution to another except in emergency.

ಮೈಸೂರು ತಾಲ್ಲೂಕಿನ ಗಿರಿಬೆಟ್ಟದ ಕೆರೆಯಲ್ಲಿ ಇಲಾಖಾವತಿಯಿಂದ ಮೀನು ಸಾಕಾಣಿಕೆ ಗುತ್ತಿಗೆ ಪಡೆದಿರುವ ಡಾ||. ವಿ. ರಾಮಸ್ವಾಮಿ ಯವರಿಗೆ ಕಿರುಕುಳ ಕೊಡುತ್ತಿರುವ ಬಗ್ಗೆ.

ಶ್ರೀ ಎಸ್. ಪ್ರಭಾಕರ ರಾಣೆ.—ಅಧ್ಯಕ್ಷರೇ, ಮೈಸೂರಿನ ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಯಿಂದ ಒಳನಾಡು ಮೀನು ಸಾಗಾಣಿಕೆ ಬಗ್ಗೆ ತರಬೇತಿ ಪಡೆದು ಡಾ||. ವಿ. ರಾಮಸ್ವಾಮಿ ಎನ್ನುವವರು ಮೈಸೂರು ತಾಲ್ಲೂಕಿನ ಗಿರಿಬೆಟ್ಟದ ಕೆರೆಯಲ್ಲಿ ಇಲಾಖಾವತಿಯಿಂದ ಗುತ್ತಿಗೆ ಪಡೆದು ಮೀನು ಸಾಕಣಿಕೆ ಪ್ರಾರಂಭಿಸಿದರು. ಸದರಿ ಡಾ||. ವಿ. ರಾಮಸ್ವಾಮಿಯವರು ಮೀನುಗಳಲ್ಲಿರುವ ಔಷಧಿಯುಕ್ತ ಔಷಧಿಯಂನ್ನು ಕಂಡುಹಿಡಿಯುವುದರ ಜೊತೆಗೆ ಮೀನು ಸಾಕಾಣಿಕೆಯಲ್ಲಿ ಶಾಸ್ತ್ರೀಯ ವೈಜ್ಞಾನಿಕ ಹಾಗೂ ತಾಂತ್ರಿಕ ವಿಧಾನಗಳನ್ನು ಅಳವಡಿಸಿಕೊಂಡು ಮೀನು ಕೃಷಿ ಪ್ರಾರಂಭಿಸಿದರು. ಈ ಕಾರ್ಯಕ್ಕಾಗಿ ಅವರು ಸ್ವಂತ ಹಣ ಅಲ್ಲದೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಮತ್ತು ಇತರರಿಂದ ೧ಲಕ್ಷದ ೮೬ ಸಾವಿರ ರೂ ಪಾಯಿಗಳನ್ನು ಪಡೆದು ಮಾಡಿದರು. ಇವರ ಪರಿಶ್ರಮದಿಂದಾಗಿ ಈ ಕೆರೆಯಲ್ಲಿ ಕೇವಲ ೧೦ ತಿಂಗಳ ಅವಧಿಯಲ್ಲಿ ೪ ಕೆ. ಜಿ. ತೂಕದ ಮೀನಿನ ಬೆಳೆ ಬೆಳೆದು ಇದುವರೆಗೆ ಇದ್ದ ಇಲಾಖಾ ದಾಖಲೆಯನ್ನು ಮುರಿದಿದ್ದಾರೆ. ಇದರಿಂದಾಗಿ ಈಕೆರೆ ದೇಶ ವಿದೇಶದವರನ್ನು ಆಕರ್ಷಿಸಿ ಮೀನು ಕೃಷಿ ಅಭ್ಯಾಸಕ್ಕೆ ಕೇಂದ್ರವಾಯಿತು. ಏಶಿಯನ್ ಇನ್ಸ್ಟಿಟ್ಯೂಟ್ ಫಾರ್ ರೂರಲ್ ಡೆವಲಪ್‌ಮೆಂಟ್ ಹಾಗೂ ಶಿವಮೊಗ್ಗದ ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಅಭ್ಯರ್ಥಿಗಳಿಗೆ ಪ್ರಾತ್ಯಕ್ಷತಾ ತರಗತಿಯನ್ನು ಮೀನುಗಾರಿಕೆ ನಿರ್ದೇಶಕರ ಆದೇಶದಂತೆ ನಡೆಸಿ ಇಲಾಖೆಯ ತಜ್ಞರಿಂದ ಮೆಚ್ಚುಗೆಯನ್ನು ಗಳಿಸಿದರು. ಇಲ್ಲಿ ಬೆಳೆದ ಮೀನನ್ನು ಡಾ||. ವಿ. ರಾಮಸ್ವಾಮಿಯವರು ಎಐಸಿಪಿ ಯೋಜನೆಯಲ್ಲಿ ಹಂಚುವ ಸಲುವಾಗಿ ಹರಿಜನ ಗಿರಿಜನ ದರ್ಬಾರಿಗೆ ಗರ್ಭಿಣಿಯರಿಗೆ ಹಾಗೂ ರೋಗಿಗಳಿಗೆ ಸಾಕಷ್ಟು ಮೀನನ್ನು ಉಚಿತವಾಗಿ ನೀಡಿದ್ದಾರೆ.

ಆದರೆ ಇಂತಹ ಮಾದರಿ ಕೆರೆಯನ್ನಾಗಿ ಮಾಡಿ ಇಲಾಖೆಯ ಕಣ್ಣನ್ನೇ ತೆರೆಯಿಸಿದ ಡಾ||. ವಿ. ರಾಮಸ್ವಾಮಿಯವರ ಬಗ್ಗೆ ಅಸೂಯೆ ಉಂಟಾಗಿ ಇಲಾಖೆಯ ಇಬ್ಬರು ಅಧಿಕಾರಿಗಳಾದ ಮೈಸೂರಿನ ಮುನ್ಸಿಪಲ್ ಕಾರ್ಯ ನಿರ್ವಹಣಾಧಿಕಾರಿ ಹಾಗೂ ಮೈಸೂರಿನ ಹಿರಿಯ ಸಹಾಯಕ ನಿರ್ದೇಶಕರು ಕಿರುಕುಳ ಕೊಡಲಾರಂಭ ಪ್ರಾರಂಭಿಸಿದರು. ೧೯೮೪-೮೫ನೇ ಸಾಲಿನ ಗುತ್ತಿಗೆ ಹಣವನ್ನು ಉಳಿದ ಮೇ ತಿಂಗಳಲ್ಲಿನಲ್ಲಿಯೆ ಡಾ||. ವಿ. ರಾಮಸ್ವಾಮಿ ಯವರು ಇಲಾಖೆಗೆ ಸಂಬಂದ್ದರೂ ಸಹಾ ಲೀಸ್ ಆರ್ಡರನ್ನು ರಿನ್ಯೂಯಲ್ ಮಾಡದೆ ೧೯೮೫ರ ಆಗಸ್ಟ್ ತಿಂಗಳವರೆಗೆ ವಿಳಂಬಿಸಿದರು. ಅಲ್ಲದೆ ಕೆಲವು ಪಟ್ಟಭದ್ರ ಹಿತಾಸಕ್ತರೊಡಗೂಡಿ ಕೆಲವು ರೌಡಿಗಳನ್ನು ಎತ್ತಿಕಟ್ಟಿ ಸದರೀ ಕೆರೆಯ ತೂಬನ್ನು ಕಿತ್ತುಹಾಕಿ ಅಕ್ರಮವಾಗಿ ನೀರನ್ನು ಬಿಟ್ಟು ಕನಿಷ್ಟ ಪಕ್ಷ ಸುಮಾರು ೫ ಲಕ್ಷ ರೂಪಾಯಿ ಬೆಲೆಬಾಳುವ ಮೀನಿನ ಸಂಪೂರ್ಣ ಲೂಟಿ ಮಾಡಿಸಿದರು. ಈ ಕಾರಿತು ಸಣ್ಣನೀರಾವಾರಿ ಇಲಾಖಾ ಹಾಗೂ

ಲೋಕೋಪಯೋಗಿ ಇಲಾಖೆಯವರು ಪೋಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತಾರೆ. ಇಲ್ಲಿದೆ ಮಾನುಗಾರಿಕಾ ಇಲಾಖೆಯ ನಿರ್ದೇಶಕರು ಸ್ವತಃ ಭೇಟಿ ನೀಡಿ ತಪ್ಪಿತಸ್ಥರ ಮೇಲೆ ಕ್ರಮ ಕೈಕೊಳ್ಳಲು ಆದೇಶ ನೀಡಿದ್ದರೂ ಸಹ ಈವರೆಗೆ ಯಾವುದೇ ಸೂಕ್ತ ಕ್ರಮ ಕೈಗೊಂಡಿರುವುದಿಲ್ಲ. ಮೀನು ಕೃಷಿಕರಿಗೆ ಮೀನಿಂ ಕೃಷಿ ಲಾಭದಾಯಕ ಉದ್ದಿಮೆ ಎಂದು ಪ್ರಚಾರಪಡಿಸಿರುವಂತೆ ಸರಕಾರಿ ಅಧಿಕಾರಿಗಳೇ ಈ ರೀತಿ ತಜ್ಞರು ಮೀನು ಕೃಷಿ ಕೈಗೊಂಡಾಗ ಅಧಿಕಾರಿಗಳಿಂದಲೇ ಕಿರುಕುಳಕ್ಕೆ ಒಳಗಾಗುವುದು ಅತ್ಯಂತ ದುರ್ದೈವದ ಸಂಗತಿ. ಇಲಾಖೆಯ ನಿರ್ದೇಶಕರು ಸದರೀ ಡಾ॥. ವಿ. ರಾಮಸ್ವಾಮಿಯವರಿಗೆ ಹಾನಿಯನ್ನು ಕುರಿತು ಪರಿಹಾರ ನೀಡಲು ಪರಿಶೀಲಿಸುವರೆಂದು ಹೇಳಿದ್ದರೂ ಸಹ ಇದುವರೆಗೂ ಇವರಿಗೆ ಯಾವ ಪರಿಹಾರವೂ ದೊರಕಿರುವುದಿಲ್ಲ.

ಹೊಸ ಪ್ರಯೋಗಗಳನ್ನು ನಡೆಸಿ ಮೀನು ಕೃಷಿಯಲ್ಲಿ ಸಂಶೋಧನೆ ನಡೆಸಬೇಕೆಂದು ಸಾವಿರಾರು ರೂಪಾಯಿ ಸಾಲ ಹೊತ್ತು ಮೀನು ಕೃಷಿ ಪ್ರಾರಂಭಿಸಿದ ಇವರಿಗೆ ಯಾವ ರಕ್ಷಣೆಯೂ ಇಲ್ಲವಾಗಿ ಬರೀ ಸಾಲ ಮಾತ್ರ ಉಳಿದಿದೆ. ಇಲಾಖೆಯಿಂದ ಇವರಿಗೆ ಸಲ್ಲಬೇಕಾದ ಸಹಾಯಧನ ಈವರೆವಿಗೂ ಪೂರ್ಣವಾಗಿ ಸಂದಾಯ ಮಾಡಿರುವುದಿಲ್ಲ. ಸದರಿ ಡಾ॥. ವಿ. ರಾಮಸ್ವಾಮಿಯವರು ಈ ಕೆರೆಯಲ್ಲಿ ಒಳನಾಡು ಮೀನು ಕೃಷಿಯಲ್ಲಿ ಸಂಶೋಧನ ಕಾರ್ಯ ನಡೆಸುತ್ತಿರುವುದರಿಂದ ಸರಕಾರಿ ಆದೇಶದ ಮೇರೆಗೆ ಇಪರಿಗೆ ಕನಿಷ್ಟ ೧೫ ವರ್ಷಗಳಾದರೂ ಧೀರ್ಘಾವಧಿ ಗುತ್ತಿಗೆಯನ್ನು ಕೊಡಬೇಕಾಗಿ ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಯು ಸರಕಾರಕ್ಕೆ ಶಿಫಾರಸ್ಸುಮಾಡಿದ್ದರೂ ಸಹ ಈ ಕುರಿತು ಈವರೆವಿಗೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

ಆದಕ್ಕಿಂದರಿಂದ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕೂಡಲೇ ಸೂಕ್ತ ಕ್ರಮ ಕೈಗೊಂಡು ಒಳನಾಡು ಮೀನು ಕೃಷಿಯಲ್ಲಿ ಸಂಶೋಧನೆ ತೊಡಗಿರುವವರಿಗೆ ಎಲ್ಲಾ ರೀತಿಯ ರಕ್ಷಣೆಯನ್ನು ನೀಡಿ ಪ್ರೋತ್ಸಾಹಿಸಿ ಒಳನಾಡು ಮೀನುಗಾರಿಕೆಯ ಅಭಿವೃದ್ಧಿಗೆ ಭದ್ರ ಬುನಾದಿ ಹಾಕಬೇಕೆಂದು ನಾನು ಈಮೂಲಕ ಸರಕಾರದ ಗಮನಕ್ಕೆ ತರುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಮಾನ್ಯ ಸಾರಿಗೆ ಸಚಿವರು).—ಅಧ್ಯಕ್ಷರೇ, ಮಾನ್ಯ ಸದಸ್ಯರು ಅಲ್ಲಿ ನಡೆದಿರತಕ್ಕ ಅವ್ಯವಹಾರದ ಬಗ್ಗೆ ಅನ್ಯಾಯದ ಬಗ್ಗೆ ಸರ್ಕಾರ ಈಗಾಗಲೇ ಕೆಲವು ಕಾರ್ಯಕ್ರಮ ತೆಗೆದುಕೊಂಡಿರುವುದರ ಬಗ್ಗೆ ಅವರು ತಿಳಿಸಿದಾರೆ. ಇನ್ನು ಉಳಿದಿತಕ್ಕ ಅವ್ಯವಹಾರಗಳು ಏನಿವೆ ಅವುಗಳ ಹಿನ್ನೆಲೆಯಲ್ಲಿ ಏನಂ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ಸರ್ಕಾರ ತೆಗೆದುಕೊಳ್ಳುತ್ತದೆಂದೂ, ಮಾನ್ಯ ಸದಸ್ಯರು ಹೇಳಿದ ಅನ್ಯಾಯಗಳನ್ನು ಸರಿಪಡಿಸುವುದಕ್ಕೆ ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸಿ ತಕ್ಷಣ ಕಾರ್ಯಕ್ರಮ ತೆಗೆದು ಕೊಳ್ಳುವುದಕ್ಕೆ ತಿಳಿಸುತ್ತೇವೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಈ ವಿಷಯದ ಬಗ್ಗೆ.....

ಅಧ್ಯಕ್ಷರು.—ನೀವು ಕೂಡಿ, ನಮಗೆ ಎ ಬಿ ಸಿ ಡಿ ಹೇಳಿಕೊಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಇದು ಎ ಬಿ ಸಿ ಡಿ ಪ್ರಶ್ನೆ ಅಲ್ಲ. ಸಂಬಂಧಪಟ್ಟ ಮಂತ್ರಿಗಳು ಸಭೆಯಲ್ಲಿ ಇರಬೇಕಾಗುತ್ತದೆ. ಇವತ್ತು ಈವಿಷಯ ಬರುತ್ತದೆ ಎಂದು ಗೊತ್ತಿದ್ದರೂ ಅವರು ಸದನದಲ್ಲಿ ಏಕೆ ಇಲ್ಲ?

ಅಧ್ಯಕ್ಷರು.—ಯೋಗ್ಯ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಹೇಳಿದ್ದನ್ನೂ ಕೇಳಿದೆ, ಅವರು ಹೇಳಿದ್ದನ್ನೂ ಕೇಳಿದೆ. ನಿಯಮ ೩೩೪ರ ಕೆಳಗೆ ಬರುವ ವಿಷಯದ ಬಗ್ಗೆ ೨ ಪ್ರತಿಪಾಡಿ ನಮಗೊಂದು ಮಂತ್ರಿಗಳಿಗೊಂದು ಕೊಡುತ್ತೀರಿ. ಆದರೂ ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಇಲ್ಲದಿದ್ದರೆ ಹೇಗೆ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ನಿಯಮದ ಕೆಳಗೆ ದಿನವೂ ೧೦-೧೫ ಪ್ರಶ್ನೆಗಳು ಬರುತ್ತವೆ. ಆಗ ಸಂಬಂಧಪಟ್ಟ ಮಂತ್ರಿಗಳು ಇಲ್ಲಿ ಇರಬೇಕಾಗುತ್ತದೆ. ಆದರೆ ಇಲ್ಲಿ ಮೂವರು ಮಂತ್ರಿಗಳು ಬಿಟ್ಟರೆ ಬೇರೆ ಯಾರೂ ಇಲ್ಲ. ನಾಳೆಯಿಂದ ಈ ನಿಯಮ ೩೩೪ರ ಬದಲು ಮತ್ತೆ ಶೂನ್ಯ ವೇಳೆಯೇ ಇರಲಿ ಎಂದು ನಾವು ಇಲ್ಲಿ ಒಂದು ಮೋಷನನ್ನು ಮೂವ್ ಮಾಡಬೇಕಾಗುತ್ತದೆ. ಇವತ್ತು ಸಂಬಂಧಪಟ್ಟ ಮಂತ್ರಿಗಳು ಎಲ್ಲಿಹೋಗಿದ್ದಾರೆ?

ಅಧ್ಯಕ್ಷರು.—ನಿಯಮ ೩೩೪ರ ಕೆಳಗೆ.....

ಶ್ರೀ ಎಂ. ವೀರಪ್ಪ ಮೊಯ್ಲಿ.—ಇವರು ಇಷ್ಟುತಿರಸ್ಕಾರ ಮಾಡುವುದಾದರೆ ನಾವು ಇಲ್ಲಿ ಏಕೆ ಇರಬೇಕು?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಸದನದಲ್ಲಿ ನಿಯಮ ೩೩ಳಿರ ಕೆಳಗೆ ಬಂದ ಎಲ್ಲಾ ಪ್ರಶ್ನೆಗಳಿಗೂ ಅವರೇ ಉತ್ತರಿಸುವುದಕ್ಕೆ ಜನರಲ್ ಪವರ್ ಆಫ್ ಅಟಾರ್ನಿ ತೆಗೆದು ಕೊಂಡಿದ್ದಾರೆಯೆ? ಹೆಚ್ಚು ಕಡಿಮೆ ಎಲ್ಲರ ಪರವಾಗಿ ಅವರೇ ಉತ್ತರಿಸುವುದನ್ನು ನಾವು ನೋಡುತ್ತಿದ್ದೇವೆ.

೩-೦೦ ಪಿ. ಎಂ.

ನಿಯಮ ೩೩ಳಿರ ನೋಟಿಸಿನ ಕೆಳಗೆ ಹಲವಾರು ಮಹತ್ತರ ವಿಚಾರಗಳನ್ನು ನಾವು ಸಭೆಯ ಗಮನಕ್ಕೆ ತರಬಯಸುತ್ತೇವೆ. ಅಂತಹ ವೇಳೆಯಲ್ಲಿ ಮಂತ್ರಿಗಳು ಇಲ್ಲಿ ಇರಲೇಬೇಕಾಗುತ್ತದೆ. ಅವರು ಇಲ್ಲದೆ ಪ್ರತಿಯೊಂದಕ್ಕೂ ಒಬ್ಬ ಮಂತ್ರಿಗಳೇ ಜನರಲ್ ಪವರ್ ಆಫ್ ಅಟಾರ್ನಿ ತೆಗೆದಂ ಕೊಂಡವರಂತೆ ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರುತ್ತೇನೆ ಎಂದು ಹೇಳುವುದಂ ಸರಿಯಲ್ಲ. ಹಾಗೂ ಇಲ್ಲದ ಮಂತ್ರಿಗಳ ಪರವಾಗಿ ಇವರು ಉತ್ತರ ಕೊಡುವುದೂ ಸರಿಯಿಲ್ಲ. ಈಗ ಸಿಂಧ್ಯಾ ಅವರು ಭರವಸೆ ಕೊಟ್ಟಿದ್ದಾರೆ. ಅದೇ ರೀತಿ ಬೇರೆ ಮಂತ್ರಿಗಳು ಇಲ್ಲಿ ಇರಬೇಕಾಗುತ್ತದೆ.

ಅಧ್ಯಕ್ಷರು.—ನಿಯಮ ೩೩ಳಿರಡಿಯಲ್ಲಿ ಯಾವ್ಯಾವ ದಿವಸ ಯಾವ್ಯಾವ ವಿಷಯಗಳಂ ಬರಂತ್ತವೆಂದು ಹೇಳಲಿಕ್ಕಾಗುವುದಿಲ್ಲ. ಆದ್ದರಿಂದ ಎಲ್ಲ ಮಂತ್ರಿಗಳೂ ನಿಯಮ ೩೩ಳಿರ ವೇಳೆಯಲ್ಲಿ ಸಭೆಯಲ್ಲಿರಲೇಬೇಕೆಂದು ಹೇಳಲಾಗದು.

ಶ್ರೀ ಎಸ್. ಬಂಗಾರಪ್ಪ.—ಈಗ ಖರ್ಗೆಯವರು ಮಂತ್ರಿಗಳಿಗೆ ಕಿವಿ ಹಿಂಡಬೇಕೆಂದು ಹೇಳಿದ್ದಾರೆ. ಅದರ ಬಗ್ಗೆ ತಾವೂ ಕೂಡ ಆಶ್ವಾಸನೆ ಕೊಟ್ಟಿದ್ದೀರಿ. ಇನ್ನೇನು ಶಾಸನಸಭೆ ಮುಂಗಿಯಂವುದರಲ್ಲಿದೆ. ಆದರೂ ಇನ್ನೂ ಉತ್ತರ ಕೊಟ್ಟಿಲ್ಲ. ಯಾವಾಗ ಇವರು ಉತ್ತರ ಕೊಡುವುದಂ ?

ಅಧ್ಯಕ್ಷರು.—೧೯೩೩ ರಿಂದ ಕೊಟ್ಟಿರತಕ್ಕಂಥ ನಿಯಮ ೩೩ಳಿರ ನೋಟಿಸ್‌ಗಳನ್ನು ಫಾಲೋ ಆಪ್ ಮಾಡಲಂ ಹೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ನಮಗೆ ಫಾಲೋ ಅಪ್ ಬೇಡ, ಉತ್ತರ ಬೇಕಂ. ಪ್ರತಿ ದಿವಸ ೧೦-೧೫ಕ್ಕೆ ಉತ್ತರ ಕೊಡಬೇಕಂ. ಹಿಂದೆ ಕೇಳಿದ್ದಕ್ಕೆಲ್ಲ ಎಲ್ಲಿ ಉತ್ತರ ಬಂದಿದೆ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಹೀಗಾದರೆ ನಿಯಮ ೩೩ಳಿರಕ್ಕೇ ಒಂದಂ ದಿವಸ ತೆಗೆದಂಕೊಳ್ಳಬೇಕಾಗುತ್ತದೆ. ಕ್ಷಮಿಸಬೇಕಂ, ನಾನಂ ವಿರೋಧವಾಗಿ ಮಾತನಾಡುತ್ತಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನಿಯಮ ೩೩ಳಿರಕ್ಕೆ ಉತ್ತರ ಕೊಡದೇ ಹೋದರೆ ಸದನದ ಕಾರ್ಯಕಲಾಪಗಳನ್ನು ನಡೆಸಲು ನಾವು ಬಿಡುವುದಿಲ್ಲ. ಇದು ತಮ್ಮ ವಿರುದ್ಧವಲ್ಲ. ಸರ್ಕಾರದ ವಿರುದ್ಧವಾಗಿ. ತಮ್ಮ ಸಹನೆಯನ್ನು ಸರ್ಕಾರದವರು ಪರೀಕ್ಷಿಸುತ್ತಿದ್ದಾರೆ.

ಶ್ರೀ ಟಿ. ಜೆ. ಆರ್. ಸಿಂಧ್ಯ.—ವಿರೋಧ ಪಕ್ಷದವರು ಮಾತನ್ನೇಲ್ಲ ಕೇಳಿದ್ದೇನೆ. ಸರ್ಕಾರದ ಪರವಾಗಿ ಭರವಸೆ ಕೊಡುತ್ತೇನೆ. ಏನು ಪ್ರಶ್ನೆಗಳಿವೆ ಅವೆಲ್ಲಕ್ಕೆ ಉತ್ತರ ಕೊಡಲಂ ಕ್ರಮ ಕೈಗೊಳ್ಳಲಾಗುವುದಂ.

ಶ್ರೀ ಎಸ್. ಬಂಗಾರಪ್ಪ.—ಯಾವಾಗ ? ಈಗಾಗಲೇ ಎಷ್ಟು ೩೩ಳಿರ ನೋಟಿಸ್‌ಗಳಂ ಫೈಲ್ ಆಪ್ ಆಗಿ ಬಿದ್ದಿದೆ. ಯಾವುದಕ್ಕೂ ಇವರು ಉತ್ತರ ಕೊಟ್ಟಿಲ್ಲ. ಎಲ್ಲಕ್ಕೂ ಉತ್ತರ ಕೊಟ್ಟ ಮೇಲೆ ಮುಂದಿನ ಕ್ರಮಕೈಗೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಶಾಸನಸಭೆ ನಡೆಯುವುದಕ್ಕೆ ಬಿಡುವುದಿಲ್ಲ. ಇದೆಲ್ಲದಕ್ಕೂ ಒಂದು ಮಿತಿ ಇರಬೇಕು. ನಿಯಮ ೩೩ಳಿರ ಬರುವ ವೇಳೆಯಲ್ಲಿ ಎಲ್ಲ ಮಂತ್ರಿಗಳಂ ಇಲ್ಲಿಗೆ ಬಂದು ಕಲಿತಂಕೊಂಡಿರಬೇಕಂ, ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ ಇಲ್ಲೇ.

ಅಧ್ಯಕ್ಷರು.—ಅಂತಹ ಶಬ್ದಗಳನ್ನು ಏತಕ್ಕೆ ಬಳಸಂತ್ತೀರಿ ?

ಶ್ರೀ ಎಸ್. ಬಂಗಾರಪ್ಪ.—ಆ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ನಮ್ಮ ನೋವು ಏನು ಎಂಬುದು ಸರ್ಕಾರಕ್ಕೆ ಗೊತ್ತಾಗಲಿ ಎಂದು.

ಅಧ್ಯಕ್ಷರು.—ಎದ್ದಿರಬೇಕು ಎಂಬ ಮಾತುಗಳೆಲ್ಲ ಬೇಡ. ನಾನು ಸರ್ಕಾರಕ್ಕೆ ಸೂಕ್ತ ಆದೇಶ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನಾವು ಇವರ ಸರ್ವೆಂಟ್ಸ್ ಎಂದು ತಿಳಿದುಕೊಂಡಿದ್ದಾರೆ. ಈಗ ಯಾವ್ಯಾವ ಮಂತ್ರಿಗಳು ಎಲ್ಲೆಲ್ಲಿದ್ದಾರೆ ? ಕೌನ್ಸಿಲ್‌ನಲ್ಲಿ ಎಷ್ಟು ಜನ ಇದ್ದಾರೆ ? ಎಂಬುದನ್ನು ಲೆಕ್ಕ ತೆಗೆದುಕೊಳ್ಳಿ. ಅವರು ಈಗ ಇಲ್ಲಿ ಬಿದ್ದಿರಬೇಕು.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಎಂದು ಹೇಳಿದರೆ ಹೇಗೆ ?

ಶ್ರೀ ಎಸ್. ಬಂಗಾರಪ್ಪ.—ಇನ್ನೂ ಬೇರೆ ಪದಗಳಿದ್ದಿದ್ದರೆ ಅವನ್ನೂ ಬಳಸಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು.—ನಿಯಮ ೩೫ರಲ್ಲಿ ಬಹಳ ಮಂಹತ್ವವಾದಂಥ ವಿಚಾರಗಳು ಬರುವ ಅಂಕಣ. ಅವುಗಳ ಬಗ್ಗೆ ಉತ್ತರ ಕೊಡಿಸುವುದಕ್ಕೆ ಆದೇಶ ಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು.—ಇದು ಆರಣ್ಯರೋದನ ಆಗಬಾರದು.

ಶ್ರೀ ಎಸ್. ಬಂಗಾರಪ್ಪ.—ತಡೆದುಕೊಳ್ಳುವುದಕ್ಕಾಗದೆ ಆ ಪದವನ್ನು ಪ್ರಯೋಗ ಮಾಡಿದ್ದೇನೆ.

ಅಧ್ಯಕ್ಷರು.—ತಾವು ವಿರೋಧ ಪಕ್ಷದ ನಾಯಕರು ಅಂತಹ ಶಬ್ದಗಳನ್ನು ಉಪಯೋಗ ಮಾಡ ಬಾರದು.

ಶ್ರೀ ಎಸ್. ಬಂಗಾರಪ್ಪ.—ಅಂತಹ ಪದಗಳನ್ನು ಹೇಳಿಸಿಕೊಳ್ಳಬಾರದು ಎಂಬ ಪ್ರಜ್ಞೆ ಅವರಿಗಿರ ಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಇಲ್ಲಿ ಆಡಿರತಕ್ಕಂತಹ ಕೆಲವು ಪದಗಳು ಸದನಕ್ಕೆ ಅಗೌರವ ತರುವಂತಹವುಗಳಾದ್ದರಿಂದ ಅವರನ್ನು ರೆಕಾರ್ಡ್‌ನಿಂದ ಎಕ್ಸ್‌ಪಂಜ್ ಮಾಡಿಸಬೇಕು.

ಅಧ್ಯಕ್ಷರು.—ಅವರ ಮನಸ್ಸಿನ ವೇದನೆಯನ್ನು ಹೇಳಿದ್ದಾರೆ, ಅಷ್ಟೇ ?

ಶ್ರೀ ಎಂ. ವೀರಪ ಮೊಯ್ಲಿ.—ಮುಖ್ಯಮಂತ್ರಿಗಳು ದೆಹಲಿಗೆ ಹೋಗಿದ್ದಾರೆ ಉಳಿದ ಮಂತ್ರಿ ಗಳು ಎಲ್ಲಿಗೆ ಹೋಗಿದ್ದಾರೆ ? ಕೌನ್ಸಿಲ್‌ನಲ್ಲಿ ಇವತ್ತು ಎಷ್ಟು ಜನ ಮಂತ್ರಿಗಳು ಇದ್ದಾರೆ. ಅದರ ಬಗ್ಗೆ ಒಂದು ಸಮಿತಿ ಮಾಡಿ ಮಂತ್ರಿಗಳು ಎಲ್ಲಿದ್ದಾರೆಂಬುದನ್ನು ಕಂಡುಹಿಡಿಯಿರಿ. ಸಭೆಯಲ್ಲಿ ಮಂತ್ರಿ ಗಳ ಹಾಜರಿ ಅತಿ ಮುಖ್ಯ. ಅವರಿಲ್ಲದಿದ್ದರೆ ನಾವೇಕೆ ಕೂಗಿತುಕೊಳ್ಳಬೇಕು ? ಯಾವಾಗಲೂ ಮಾನ್ಯ ವಿ. ಎಲ್. ಪಾಟೀಲರು, ಮಾನ್ಯ ಸಿಂಧ್ಯಾರವರು ಪ್ರಕಾಶ್‌ರವರು ಇಂಥ ಕೆಲವರು ಮಾತ್ರ ಇರುತ್ತಾರೆ. ಮೊನ್ನೆ ಕೋರಂ ಕೂಡ ಇರಲಿಲ್ಲ. I am losing interest in sitting in this House. This is for your kind information.

ಇದನ್ನು ನಾನು ಬಹಳ ದುಃಖದಿಂದ ಹೇಳಂತ್ತಿದ್ದೇನೆ. ಟ್ರೆಜರಿ ಬೆಂಚ್‌ನವರಿಗೇ ಆಸಕ್ತಿ ಇಲ್ಲ, ನಾವ್ಯಾಕೆ ಕೂಗಿತುಕೊಳ್ಳಬೇಕು ? ನಮ್ಮಂತಹ ಸೀನಿಯರ್ ಮೆಂಬರ್ಸಗೇ ಈ ಥರ ಆದರೆ ಇನ್ನು ಜೂನಿಯರ್ ಮೆಂಬರ್ಸ್‌ಗಳ ಪರಿಸ್ಥಿತಿಯನ್ನು ತಾವೇ ನಿರ್ಧರಿಸಬೇಕು. ಅವರಿಗೆ ಆಸಕ್ತಿ ಹೊರಟು ಹೋಗುತ್ತದೆ. ಇದು ಬಹಳ ಗಂಭೀರವಾದ ವಿಷಯ. ಮಂತ್ರಿಗಳು ಸದನ ನಡೆಯುವ ಸಮಯದಲ್ಲಿ ಈ ಮನೆಯಲ್ಲಿ ಹಾಜರಿರಬೇಕು. ಮಂತ್ರಿಗಳು ಅವರ ಚೇಂಬರ್‌ನಲ್ಲಿ ಹಾಯಾಗಿ ಕೂತು ಈ ಮನೆ ಹೇಗಾದರೂ ನಡೆಯಲಿ ಎಂದುಕೊಂಡಿರಬೇಕು. ಎಲ್ಲ ಮಂತ್ರಿಗಳು ಈ ಸದನಕ್ಕೆ ಬಂದರೆ ಒಂದು ಶೋಭೆ ಬರುತ್ತದೆ.

ಅಧ್ಯಕ್ಷರು.—ಮಂತ್ರಿಗಳೆಲ್ಲರ ಪರವಾಗಿ ಒಬ್ಬ ಮಂತ್ರಿ ಹೇಳಿದ್ದಾರೆ. ಇನ್ನೆರಡು ಮೂರು ದಿವಸ ಗಳಲ್ಲಿ ಉತ್ತರ ಕೊಡಿಸಲು ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ವಿರೋಧ ಪಕ್ಷದವರು ಮಾತನಾಡಿದ್ದಾರೆ. ಮಾನ್ಯ ಬಂಗಾರಪ್ಪನವರು, ಮೊಯ್ಲಿಯವರು, ಖರ್ಗೆಯವರೆಲ್ಲ ಮಾತನಾಡಿದ್ದಾರೆ. ಮಂತ್ರಿಗಳು ಹಾಜರಿರ

ಬೇಕೆಂಬ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ. ಶಾಸನಸಭೆ ನಡೆಯುವಾಗಲೂ ಕೂಡ ಸರ್ಕಾರದ ಕೆಲಸ ನಡೆಯಬೇಕಾಗಿರುವುದರಿಂದ ಮಂತ್ರಿಗಳು ಅವರ ಚೇಂಬರ್‌ನಲ್ಲಿ ಇರಬಹುದು. ಲೋಕಸಭೆಯಲ್ಲಿ ರಾಜ್ಯಸಭೆಗಳಲ್ಲೂ ಕೂಡ ಎಲ್ಲ ಮಂತ್ರಿಗಳು ಎಲ್ಲಿರುತ್ತಾರೆ ? ಇದು ನಿಮಗೆ ಗೊತ್ತಿರಬೇಕಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇವರು ಏಕೆ ಪಾರ್ಲಿಮೆಂಟ್ ಬಗ್ಗೆ ಮಾತನಾಡುತ್ತಿದ್ದಾರೆ ?

(ಗೊಂದಲ)

ಅಧ್ಯಕ್ಷರ ಅಪ್ಪಣೆಯ ಮೇರೆಗೆ ಈ ಪದವನ್ನು ಕಡತದಿಂದ ತೆಗೆದುಹಾಕಲಾಗಿರುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಪಾರ್ಲಿಮೆಂಟ್‌ನಲ್ಲಿ ಮಂತ್ರಿಗಳೇ ಇರುವುದಿಲ್ಲ ಎಂದರೆ ಎಲ್ಲೆಲ್ಲೋ ಹೋಗುತ್ತಾರೆಂದು ಅಲ್ಲ.

ಶ್ರೀ ಎಸ್. ಮಲ್ಲಾರಗೌಡ ಪಾಟೀಲ್.—ನಿಮ್ಮ ಮಂತ್ರಿಮಂಡಲದ ಸದಸ್ಯರ ಬಗ್ಗೆ ಹೇಳಿ. ಪಾರ್ಲಿಮೆಂಟ್ ಬಗ್ಗೆ ಏತಕ್ಕೆ ಹೇಳುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಪಾರ್ಲಿಮೆಂಟ್‌ನಲ್ಲಿ ಮಂತ್ರಿಗಳು ಗೈರು ಹಾಜರಿರುತ್ತಾರೆ ಆದ್ದರಿಂದ ಇಲ್ಲೂ ಮಂತ್ರಿಗಳು ಗೈರುಹಾಜರು ಇರಬೇಕೆಂದು ನಾನು ಹೇಳುತ್ತಿಲ್ಲ. ಇಲ್ಲಿ ಮಾನ್ಯ ಸದಸ್ಯರು ಕೇಳತಕ್ಕ ಪ್ರಶ್ನೆಗಳಿಗೆ ಸಂಬಂಧಪಟ್ಟಂತೆ ಮಂತ್ರಿಗಳು ಉತ್ತರವನ್ನು ಕೊಡಲು ಇಲ್ಲಿ ಇರಲೇಬೇಕು. ನಿಯಮ ೩೩ಳಿರ ಕೆಳಗೆ ಬರತಕ್ಕ ವಿಷಯಗಳಿಗಾಗಲೀ, ಗಮನ ಸೆಳೆಯುವ ಸೂಚನೆಗೆ ಆಗಲಿ, ಅಥವಾ ಬೇರೆ ಯಾವುದೇ ವಿಚಾರಕ್ಕಾಗಲಿ, ಸಂಬಂಧಪಟ್ಟ ಮಂತ್ರಿಗಳು ಇಲ್ಲಿ ಉತ್ತರ ಕೊಡತಕ್ಕದ್ದು ಅವಶ್ಯವಿದೆ. ಆದ್ದರಿಂದ ಸಚಿವರು ಇರಲೇಬೇಕೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಮಂ೩ಖ್ಯವಾಗಿ ವಿನು ಹೇಳುತ್ತಿದ್ದಾರೆಂದರೆ.....

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಬಂಗಾರಪ್ಪನವರ ಮನಸ್ಸಿಲ್ಲಿರುವುದು ಏನೆಂದು ನಮಗೆ ಗೊತ್ತಿದೆ. ಈಗಾಗಲೇ ಬಹಳಷ್ಟು ಪ್ರಶ್ನೆಗಳನ್ನು ನಿಯಮ ೩೩ಳಿರ ಕೆಳಗೆ ಕೇಳಿದ್ದಾರೆ. ಅವುಗಳಿಗೆಲ್ಲಾ ಈ ಅಧಿವೇಶನ ಮುಗಿಯುವುದರೊಳಗೆ ಉತ್ತರವನ್ನು ಕೊಡುವಂತೆ ವ್ಯವಸ್ಥೆ ಮಾಡುತ್ತೇವೆ. ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ಒಂದು ಮನವಿ ಮಾಡಿಕೊಳ್ಳುವುದೇನೆಂದರೆ ನಾನು ಅವರ ವಾದವನ್ನು ಒಪ್ಪಿಕೊಂಡರೂ ಕೂಡ ಅವರು ಮಾತನಾಡುವಾಗ "ಮಂತ್ರಿಗಳು ಇಲ್ಲಿ * *" ಎಂದು ಹೇಳಿದ್ದು ಸರಿಯಲ್ಲ. ಈ ಪದ ಪ್ರಯೋಗ ಯಾರಿಗೂ ಕೂಡ ಗೌರವವನ್ನು ತರತಕ್ಕದ್ದಲ್ಲ.

ಅಧ್ಯಕ್ಷರು.—ಮತ್ತೆ ಅದನ್ನೇ ಏತಕ್ಕೆ ಹೇಳುತ್ತೀರಿ ? ಆ ಪದವನ್ನು ಎಕ್ಸ್‌ಪಂಜ್ ಮಾಡಿದ್ದೇನೆಂದು ಹೇಳಿದ್ದಾಗಿದೆ. I will also follow it up.

ಶ್ರೀ ಎಸ್. ಬಂಗಾರಪ್ಪ.—ಇದುವರೆಗೆ ನೂರಾರು ಸಂಖ್ಯೆಯಲ್ಲಿ ನಿಯಮ ೩೩ಳಿಕ್ಕೆ ನಮಗೆ ಉತ್ತರಗಳು ಬರಬೇಕಾಗಿವೆ ಇದುವರೆಗೂ ಒಂದೂ ಕೂಡ ಬಂದಿಲ್ಲ. ಇವುಗಳಿಗೆಲ್ಲಾ ಉತ್ತರವನ್ನು ಒದಗಿಸಲು ಒಂದು ದಿವಸವನ್ನು ನಿಗದಿಮಾಡಿದ್ದರೆ. there is no other way out.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸ್ವಾಮಿ ಈಗ ೭ ಜನ ಸದಸ್ಯರು ನಿಯಮ ೩೩ಳಿರ ಕೆಳಗೆ ಪ್ರಶ್ನೆಯನ್ನು ಕೇಳಿದ್ದಾರೆ. ಆ ೭ ಜನ ಮಂತ್ರಿಗಳಾದರೂ ಇಲ್ಲಿ ಇರಬೇಕಾಗಿತ್ತಲ್ಲ. ಸಮಾನ್ಯವಾಗಿ ಆಯಾಯ ದಿವಸ ಸದನದಲ್ಲಿ ಪ್ರಸ್ತಾಪಕ್ಕೆ ಬರತಕ್ಕ ನಿಯಮ ೩೩ಳಿರ ವಿಚಾರಗಳು ಒಂದು ಗಂಟೆ ಮುಂಚಿತವಾಗಿ ಸಚಿವರಿಗೆ ನೋಟೀಸ್ ಹೋಗಿರುತ್ತದೆ. ಅಂದಮೇಲೆ ಅವರು ಸದನಕ್ಕೆ ಬರಬೇಕು, ಸರ್ಕಾರದ ಕೆಲಸ ಇರುತ್ತದೆ ಎಂಬುದು ನಮಗೂ ಗೊತ್ತಿದೆ. ಮಾನ್ಯ ಮುಂ೩ಖ್ಯ ಮಂತ್ರಿಗಳು ಇವತ್ತು ಸದನದಲ್ಲಿ ಇರಬೇಕೆಂದು ನಾವೇನೂ ಕೇಳುತ್ತಿಲ್ಲ. ಏಕೆಂದರೆ ಕಾರ್ಯಾರ್ಥವಾಗಿ ಅವರು ದೆಹಲಿಗೆ ಹೋಗಿದ್ದಾರೆ. ಆದರೆ ಇವತ್ತು ಯಾರ್ಯಾರ ಇಲಾಖೆಗೆ ಸಂಬಂಧಪಟ್ಟಂತೆ ಪ್ರಶ್ನೆಗಳು ಬರುತ್ತಿವೆ ಆ ಮಂತ್ರಿಗಳಾದರೂ ಸದನದಲ್ಲಿದ್ದು ಉತ್ತರವನ್ನು ಕೊಡಬಹುದಿತ್ತಲ್ಲಾ ? ಅವರು ಏತಕ್ಕೆ ಬಂದಿಲ್ಲ?

ಶ್ರೀ ಕೆ. ಎಚ್. ಪಾಟೀಲ್.—ಕೇವಲ ಉತ್ತರಕ್ಕೋಸ್ಕರವಾಗಿಯೇ ನಾವು ಇಲ್ಲಿ ಬಂದು ಮಾತನಾಡಬೇಕಾಗಿಲ್ಲ. ಲಿಖಿತ ಮೂಲಕ ಬೇಕಾದರೂ ಉತ್ತರವನ್ನು ತರಿಸಿಕೊಳ್ಳಬಹುದು. ಅದೂ ಇಲ್ಲದಿದ್ದರೆ ಇಲಾಖಾ ಮುಂ೩ಖ್ಯಸ್ಥರಿಗೆ ಪತ್ರವನ್ನು ಬರೆದು ಉತ್ತರವನ್ನು ತರಿಸಿಕೊಳ್ಳಬಹುದು. ಅವರು

ಉತ್ತರವನ್ನು ಕೊಡಲೇಬೇಕಾಗುತ್ತದೆ. It is the privilege of member to get any information and we are coming to that when we are speaking on the General Administration. ನಾವು ಒಂದು ಪಿಸ್ತನ್ನು ಕಾಪಾಡಬೇಕು. ಅದೇ ರೀತಿ ನಾವು ಸದಸ್ಯರೂ ಕೂಡ ಪದೇ ಪದೇ ಎದ್ದು ಆಚೆಗೆ ಹೋಗುವುದೂ ತಪ್ಪು. ಜನರು ನಮ್ಮನ್ನು ಆರಿಸಿ ಕಳುಹಿಸಿರುವುದು ಕೇವಲ ಪಗಾರವನ್ನು ತೆಗೆದುಕೊಂಡು ಹೋಗುವುದಕ್ಕಾಗಿ ಅಲ್ಲ. ಸಂಬಂಧಪಟ್ಟ ಮಂತ್ರಿಗಳು ಊರಿನಲ್ಲಿಲ್ಲದಿದ್ದರೆ ನಾವು ನಿಮ್ಮನ್ನು ಕೇಳುವುದಿಲ್ಲ. ಒಮ್ಮೊಮ್ಮೆ ನಾವು ನಿಮ್ಮನ್ನು ಬೈಯುತ್ತೇವೆ. ಆದರೆ ನಾವು ಬೈಯುವುದಕ್ಕಾಗಿ ಇಲ್ಲಿಗೆ ಬರುವುದಿಲ್ಲ. ನೀವು ಇಲ್ಲಿ ಬಂದು ಉತ್ತರ ಕೊಡಬೇಕು. ನಾಳೆಯಿಂದಲಾದರೂ ಸಾಧ್ಯವಾದಷ್ಟೂ ಸಚಿವರು ಇಲ್ಲಿ ಇರುವಂತೆ ಹೇಳಬೇಕು.

ಶ್ರೀ ಬಿ. ರಾಚಯ್ಯ.— ಮಾನ್ಯ ಅಧ್ಯಕ್ಷರೆ, ನಾನು ಊಟಕ್ಕೆ ಹೋಗಿದ್ದೆ.

ಅಧ್ಯಕ್ಷರು.—ನಿಯಮ ೩೫೪ಕ್ಕೆ ಸಂಬಂಧಪಟ್ಟ ಮಂತ್ರಿಗಳಿಂದ ಸರಿಯಾದ ಉತ್ತರ ಬರುತ್ತಿಲ್ಲವೆಂದು ಮಾನ್ಯ ಸದಸ್ಯರು ಕ್ರಿಯಾಲೋಪ ಎತ್ತಿದ್ದಾರೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಬೊಮ್ಮಾಯಿಯವರು ಒಂದು ಮಾತನ್ನು ಹೇಳಿದ್ದಾರೆ. ಅದು ಒಪ್ಪತಕ್ಕದ್ದು. ಹೊಸ ಸಂಸ್ಪದಾಯವನ್ನು ಹಾಕಬಾರದೆಂದು ಹೇಳಿದ್ದಾರೆ. ಇವತ್ತು ಏನಾಗುತ್ತಿದೆ ಎಂದರೆ ಸರ್ಕಾರದ ಕೆಲಸದ ನೆಪದಲ್ಲಿ ಸಚಿವರು ಅವರವರ ಮನೆಗಳಲ್ಲಿ ಇದ್ದರೂ ಕೂಡ ಒಂದು ಹೊಸ ಪರಂಪರೆಯನ್ನು ಹಾಕಿದಂತಾಗುತ್ತದೆ. ಆದರೆ ತಾವು ಆ ಅರ್ಥದಲ್ಲಿ ಮಾತನಾಡಲಿಲ್ಲವೆಂದು ನಾನು ಭಾವಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನಂ ಆ ಅರ್ಥದಲ್ಲಿ ಹೇಳಲಿಲ್ಲ. ಯಾವ ಸಚಿವರಿಗೆ ಸಂಬಂಧಪಟ್ಟಂಥ ಪ್ರಶ್ನೆ ಇರುತ್ತದೆ ಆ ಸಚಿವರಂತೂ ಇರಲೇಬೇಕು ಅವರ ಜೊತೆಗೆ ಜೇರೆ ಸಚಿವರೂ ಕೂಡ ಇರಬೇಕು.

೯) ತಿಪಟೂರು ತಾಲ್ಲೂಕು ಪಂಲ್ಲೇನಹಳ್ಳಿಯ ಕಲ್ಲಳ್ಳಮ್ಮ ದೇವರ ಅರ್ಚಕರಾದ ಮೂಡಲಗಿರಿಯಪ್ಪ ಎಂಬುವರಿಗೆ ಪೋಲೀಸ್ ಸಬ್ ಇನ್‌ಪೆಕ್ಟರ್‌ರಿಂದ ಕಿರುಕುಳ.

ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).—ಮಾನ್ಯ ಅಧ್ಯಕ್ಷರೆ, ಸುಮಾರು ೩ ತಿಂಗಳ ಹಿಂದೆ ತಿಪಟೂರು ಗ್ರಾಮಾಂತರ ಪೋಲೀಸ್ ಠಾಣೆ ಸಬ್ ಇನ್‌ಸ್ಪೆಕ್ಟರ್ ಡಿ. ರಂಗನಾಥ್ ಎಂಬುವರು ಅವರ ಆನಂಯಾಯಿಗಳ ಸಮೇತ ತಿಪಟೂರು ತಾಲ್ಲೂಕು ಕಿಬ್ಬನಹಳ್ಳಿ ಹೋಬಳಿ ಪಂಲ್ಲೇನಹಳ್ಳಿಯ ಕಲ್ಲಳ್ಳಮ್ಮ ದೇವರ ಅರ್ಚಕರಾದ ಮೂಡಲಗಿರಿಯಪ್ಪ ಅವರ ಮನೆಗೆ ಹೋಗಿ ಕಾಪ್ಯಾಳು ಗ್ರಾಮದ ಚೆನ್ನವೀರಪ್ಪ ನವರ ಮನೆಯಲ್ಲಿ ೨೬-೩-೮೫ ರಂದು ನಡೆಯಿತ್ತೆನ್ನಲಾದ ಕಳ್ಳತನಕ್ಕೆ ಸಂಬಂಧಪಟ್ಟ ಒಡವೆಗಳನ್ನು ಅಪರಾಧಿಗಳೆನ್ನೊಬ್ಬರಾದ ಚಂದ್ರಯ್ಯನಿಂದ ಪಡೆದುಕೊಂಡು ಹಣ ಕೊಟ್ಟಿರುವುದಾಗಿ ಅಪಾದಿಸಿ ಅವರನ್ನು ಪೋಲೀಸ್ ಠಾಣೆಗೆ ಕರೆದೊಯ್ದು ಹಿಂಸಿಸಿ ಹೊಡೆದಿದ್ದು ಮತ್ತು ಕಳ್ಳತನದ ಮಾಲಿನ ಬಗ್ಗೆ ಏನೂ ಗೊತ್ತಿಲ್ಲವೆಂದು ಬೇಡಿಕೊಂಡಾಗ್ಯೂ ಅಪರಾಧಿ ಚಂದ್ರಯ್ಯನನ್ನು ಕರೆದು ಚಪ್ಪಲಿಯಲ್ಲಿ ಹೊಡೆಯುವಂತೆ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ತಿಳಿಸಿದ ಸಮಯದಲ್ಲಿ ಮೂಡಲಗಿರಿಯಪ್ಪ ಅವರು ವಿನಾಕಾರಣ ಚಪ್ಪಲಿಯಲ್ಲಿ ಹೊಡೆಸಿಕೊಳ್ಳುವುದಕ್ಕೆ ಇಷ್ಟಪಡದೆ ಅವರು ಏನು ಕೇಳಿದಾಗ್ಯೂ ಕೊಡುವುದಾಗಿ ಒಪ್ಪಿಕೊಂಡು ಸದರೀ ಸಬ್ ಇನ್ಸ್‌ಪೆಕ್ಟರ್ ಆಜ್ಞೆಯಮೇರೆಗೆ ೪೦ ಸಾವಿರ ರೂಪಾಯಿಗಳನ್ನು ಕೊಡಲೊಪ್ಪಿದ್ದು ಅವರಿಗೆ ಕರ್ನಾಟಕ ಲಾಟರಿ ಮೂಲಕ ಬಂದಿದ್ದ ಉಳಿಕೆ ಹಣ ೩೫ ಸಾವಿರ ರೂಪಾಯಿಗಳನ್ನು, ತಿಪಟೂರಿನ ವೈಶ್ಯಾ ಬ್ಯಾಂಕಿನಿಂದ ಪಡೆದುಕೊಂಡು ಉಳಿದ ೫ ಸಾವಿರ ರೂಪಾಯಿಗಳನ್ನು ಬೈರಪುರದ ಸಂಜಪ್ಪನ ಮಗ ಶಂಕರಯ್ಯನವರಿಂದ ಪಡೆದುಕೊಂಡು ಶಂಕರಯ್ಯನವರೊಡಗೂಡಿ ಮೇಲ್ಕಂಡ ಸಬ್ ಇನ್ಸ್‌ಪೆಕ್ಟರ್ ಶ್ರೀ ರಂಗನಾಥ ಅವರಿಗೆ ಅವರ ಮನೆಯಲ್ಲೇ ತಲುಪಿಸಿರುತ್ತಾರೆಂದು ತಿಳಿದುಬಂದಿದೆ. ಈ ಹಣಕ್ಕೆ ರಿಸೀದಿ ಕೊಡುವುದಾಗಿ ಸದರಿ ಸಬ್ ಇನ್ಸ್‌ಪೆಕ್ಟರ್ ಅವರಿಗೆ ಮಾತು ಕೊಟ್ಟಿದ್ದು ರಸೀತಿಯನ್ನು ಅವರು ಕೊಟ್ಟಿರುವುದಿಲ್ಲ. ಈ ಬಗ್ಗೆ ಒತ್ತಾಯಿಸಿದಾಗ ಸದರಿ ಸಬ್ ಇನ್ಸ್‌ಪೆಕ್ಟರ್ ಮೇಲ್ಕಂಡ ಹಣದಲ್ಲಿ ಕಳವು ಆದ ಒಡವೆಗಳ ಪೈಕಿ ೪ ಎಳೆ ಸರ ಹಾಗೂ ೨ ಬಳೆ ಮಾಡಿಸಿರುವುದಾಗಿಯೂ ಹಾಗೂ ಈ ವಿಷಯವನ್ನು ಯಾರಲ್ಲಿಯೂ ಹೇಳಬಾರದೆಂದೂ, ಒಂದು ಪಕ್ಷ ಹೇಳಿದಲ್ಲಿ